2004ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ಸಾಮೂಹಿಕ ಔಷಧ ನೀಡಿಕೆ ಕಾರ್ಯಕ್ರಮಕ್ಕಾಗಿ ರಾಜ್ಯಕ್ಕೆ ಒಟ್ಟು ರೂ. 59.50 ಲಕ್ಷಗಳ ನಗದು ಅನುದಾನವನ್ನು ನೀಡಿರುತ್ತದೆ. ಇದರಲ್ಲಿ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ತಲಾ ರೂ. 5.25 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ಊ) ಆನೇಕಾಲು ರೋಗ ನಿವಾರಣೆಗೆ, ಎಂದರೆ ಮೈಕ್ರೊಫೈಲೇರಿಯಾ ಜಂತುಗಳ ನಿವಾರಣೆಗಾಗಿ ಡಿ.ಇ. ಸಿ. (ಡೈ ಈಥೈಲ್ ಕಾರ್ಬಮೇಜನ್) ಗುಳಿಗೆಗಳನ್ನು ನೀಡಲಾಗುತ್ತಿದೆ. ಈ ಗುಳಿಗೆಗಳು ಅತ್ಯಂತ ಸುರಕ್ಷಿತವಾಗಿದೆ. ಆದರೆ ಹೆಚ್ಚಿನ ಪ್ರಮಾಣದಲ್ಲಿ ಮೈಕ್ರೋಫೈಲೇರಿಯಾ ಜಂತುಗಳನ್ನು ರಕ್ತದಲ್ಲಿ ಹೊಂದಿರುವ ವ್ಯಕ್ತಿಗಳು ಈ ಗುಳಿಗೆಗಳನ್ನು ಸೇವಿಸಿದಾಗ ಕೆಲವು ಬಹು ಸಾಮಾನ್ಯ ಚಿಹ್ನೆಗಳಾದ ವಾಕರಿಕೆ. ವಾಂತಿ, ದುಂಪರು ಕಾಣೀಸಿಕೊಳ್ಳುತ್ತವೆ. ಈ ಚಿಹ್ನೆಗಳು ಕೇವಲ ತಾತ್ಕಾಲಿಕವಾಗಿದ್ದು ಕ್ರಮೇಣ ಸ್ವಲ್ಪ ಸಮಯದ ನಂತರ ತಾನೇತಾನಾಗಿ ಉಪಶಮನವಾಗುತ್ತದೆ. ಇದರಿಂದ ಯಾವುದೇ ವಿಧವಾದ ಸಾವುನೋವುಗಳು ಸಂಭವಿಸುವ ಸಾಧ್ಯತೆ ಇರುವುದಿಲ್ಲ.

ಋ) ಇಲ್ಲ.

ಋ) ಡಿ.ಇ.ಸಿ. ಗುಳಿಗೆಗಳನ್ನು ಸೇವಿಸಿದ ಹರೀಶ್ ಎಂಬ ಹುಡುಗನ ಮರಣ ಪ್ರಕರಣದ ತನಿಖೆಯನ್ನು ಜಿಲ್ಲಾ ಮಲೇರಿಯಾ ಅಧಿಕಾರಿಗಳು ಮತ್ತು ತಾಲ್ಲೂಕು ವೈದ್ಯಾಧಿಕಾರಿಗಳು ನಡೆಸಿರುತ್ತಾರೆ.

ವಿವರ:

ಡಿ.ಇ.ಸಿ. ಗುಳಿಗೆಯನ್ನು ದಿನಾಂಕ: 8-6-2004 ರಂದು ಸೇವಿಸಿದ ಹುಡುಗ ಶಾಲೆಗೆ ಎಂದಿನಂತೆ ದಿನಾಂಕ: 9-6-2004 ಮತ್ತು 10-6-2004 ರಂದು ಹಾಜರಾಗಿದ್ದು, ಈ ವೇಳೆಯಲ್ಲಿ ಯಾವುದೇ ಅಡ್ಡ ಪರಿಣಾಮ ಕಂಡುಬಂದಿರುವುದಿಲ್ಲ.

ದಿನಾಂಕ: 10-6-2004 ರಂದು ಸಂಜೆ ಹುಡುಗನಿಗೆ ಜ್ವರ ಕಾಣಿಸಿಕೊಂಡಿದ್ದು ದಿನಾಂಕ: 11-6-2004 ರಂದು ಪ್ರಾ.ಆ.ಕೇಂದ್ರ. ನೆಲ್ಯಾಡಿಯಲ್ಲಿ ಚಿಕಿತ್ಸೆ ನೀಡಿ ಜ್ವರ ಕಡಿಮೆಯಾಗದ ಕಾರಣ 15-6-2004 ರಂದು ರಾತ್ರಿ ಪುತ್ತೂರಿನ ಖಾಸಗೀ ಆಸ್ಪತ್ರೆಯಲ್ಲಿ ದಾಖಲಾಗಿರುತ್ತಾರೆ. ಡಾ: ಶ್ಯಾಂ, ಎಂ.ಡಿ. ಇವರು ಕ್ಷ-ಕಿರಣ ಮತ್ತು ಇತರೇ ತಪಾಸಣೆಗಳನ್ನು ನಡೆಸಿ ಚಿಕಿತ್ಸೆ ನೀಡಿರುತ್ತಾರೆ. ಸದರಿ ವೈದ್ಯರ ಅಭಿಪ್ರಾಯದಂತೆ, ಹುಡುಗನಿಗೆ ಟಿ.ಬಿ. ಖಾಯಿಲೆ ಇದ್ದು, ಆತನು ದಿನಾಂಕ: 16-6-2004 ರಂದು ಬೈಲ್ಯಾಟರಲ್ ಎಕ್ಸ್‌ಟೆನ್ಸಿವ್ ಮಿಲಿಯರಿ ಕ್ಷಯರೋಗದಿಂದ ಮೃತ ಪಟ್ಟಿರುತ್ತಾನೆ ಎಂದು ತಿಳಿಸಿರುತ್ತಾರೆ. ಡಿ.ಇ.ಸಿ.ಗುಳಿಗೆ ನೀಡಿಕೆಯಿಂದ ಈ ಮರಣವು ಸಂಭವಿಸಿರುವುದಿಲ್ಲ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಮೃತನ ಕುಟುಂಬದವರಿಗೆ ಪರಿಹಾರ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಪುತ್ತೂರು ತಾಲ್ಲೂಕಿನಲ್ಲಿ ಪ್ರೌಢ ಶಾಲಾ ಪರೀಕ್ಷೆಯ ಫಲಿತಾಂಶದ ಬಗ್ಗೆ

65 (105) : ಶ್ರೀಮತಿ ಶಕುಂತಲಾ ಟಿ. ಶೆಟ್ಟಿ (ಪುತ್ತೂರು) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪುತ್ತೂರು ತಾಲ್ಲೂಕಿನಲ್ಲಿ 2002-03, 2003-04ರಲ್ಲಿ 7 ಮತ್ತು 10ನೇ ತರಗತಿಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ ಎಷ್ಟು;

ಅ) ಪುತ್ತೂರು ತಾಲ್ಲೂಕಿನ ಸರ್ಕಾರಿ ಪ್ರೌಢಶಾಲೆಗಳಲ್ಲಿ 8ನೇ ತರಗತಿಗೆ ಮತ್ತು ಜ್ಯೂನಿಯರ್ ಕಾಲೇಜುಗಳಲ್ಲಿ ಪ್ರವೇಶಾವಕಾಶಕ್ಕೆ ನಿಗದಿಪಡಿಸಿರುವ ಸಂಖ್ಯೆ ಎಷ್ಟು;

ಇ) ಪ್ರವೇಶಾವಕಾಶ ಸಿಗದೆ ಉಳಿದ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು (ವಿವರ ಒದಗಿಸುವುದು)

ಶ್ರೀ ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಗಳು)

ಅ)

	7ನೇ ತರಗತಿ ವಿದ್ಯಾರ್ಥಿಗಳು	10ನೇ ತರಗತಿ ವಿದ್ಯಾರ್ಥಿಗಳು
2002–03	5263	2722
2003–04	6057	3096

ಆ) ಪ್ರೌಢಶಾಲೆಯ 8ನೇ ತರಗತಿಗೆ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳಲು ಸಂಖ್ಯೆ ನಿಗದಿಪಡಿಸಿರುವುದಿಲ್ಲ.

ಸರ್ಕಾರಿ ಪ.ಪೂ.ಕಾಲೇಜಿಗೆ ಪ್ರವೇಶಾವಕಾಶ ಕೋರಿ ಬಂದವರಿಗೆಲ್ಲಾ ದಾಖಲಾತಿ ಮಾಡಿಕೊಳ್ಳಲು ತಿಳಿಸಲಾಗಿದೆ.

ಇ) ಪ್ರವೇಶಾವಕಾಶ ಕೋರಿ ಬಂದ ಅರ್ಜಿಗಳೆಲ್ಲವನ್ನೂ ಪರಿಗಣಿಸಲಾಗುತ್ತಿದೆ.

ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ಆರ್ಥಿಕ ನೆರವು ನೀಡುವ ಬಗ್ಗೆ

67 (110) : ಶ್ರೀಮತಿ ಶಕುಂತಲಾ ಟಿ. ಶೆಟ್ಟಿ (ಪುತ್ತೂರು) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಆರ್ಥಿಕ ನೆರವು ನೀಡುವ ಸಾಂತ್ವನ ಯೋಜನೆ ಜಾರಿಯಲ್ಲಿದೆಯೇ? (ಯೋಜನೆಯ ವಿವರಗಳೇನು?)

ಆ) ಈ ಯೋಜನೆಯ ಮೂಲಕ ಇದುವರೆವಿಗೂ ಎಷ್ಟು ಜನ ಮಹಿಳೆಯರಿಗೆ ಸಾಂತ್ವನ ನೀಡಲಾಗಿದೆ? (ಜಿಲ್ಲಾವಾರು ಮಾಹಿತಿ ನೀಡುವುದು)

ಶ್ರೀ ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಗಳು)

ಅ) ಹೌದು.

ವಿವರ ಕೆಳಕಂಡಂತೆ ಒದಗಿಸಲಾಗಿದೆ. ದೌರ್ಜನ್ಯಕ್ಕೆ ಒಳಪಟ್ಟ ಮಹಿಳೆಯರಿಗೆ ಕಾನೂನು ಸಲಹೆ ಆರ್ಥಿಕ ಪರಿಹಾರ, ತಾತ್ಕಾಲಿಕ ಆಶ್ರಯ, ರಕ್ಷಣೆ ನೀಡುವುದರ ಜೊತೆಗೆ ಸ್ಪ್ರೇರಣೆಯಿಂದ ತಮ್ಮ ಕಾಲ ಮೇಲೆ ತಾವು ನಿಲ್ಲಲು ಅನುಕೂಲವಾಗುವಂತೆ ತರಬೇತಿ ನೀಡುವುದು, ಹಾಗೂ ಇಂತಹ ಮಹಿಳೆಯರು ಸಮಾಜದಲ್ಲಿ ಇತರೆ ಮಹಿಳೆಯರಂತೆ ಧೈರ್ಯವಾಗಿ ಬದುಕುವಂತೆ ಹಾಗೂ ಸ್ವಶಕ್ತರನ್ನಾಗಿ ಮಾಡುವುದು ಈ ಯೋಜನೆಯ ಉದ್ದೇಶ.

ಯೋಜನೆಯಡಿ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಲಾಗಿದೆ.

1) ಉಚಿತ ದೂರವಾಣಿ ಸಂಖ್ಯೆ: 1091

2) ಸಂಕಷ್ಟಕ್ಕೆ ಒಳಗಾದ ಮಹಿಳೆಯರಿಂದ ಹಾಗೂ ಮನೆಯಲ್ಲಿನ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯದ ಯಾವುದೇ ದೂರನ್ನು ಬೆಳಿಗ್ಗೆ 8.00 ಗಂಟೆಯಿಂದ ರಾತ್ರಿ 8.00 ಗಂಟೆಯವರೆಗೆ ಸ್ವೀಕರಿಸಲಾಗುವುದು.